

ಹೈದರಾಬಾದಿನ ರಾಜೀವ್ ಗಾಂಧಿ ಇಂಟರ್‌ನ್ಯಾಷನಲ್ ಟರ್ಮಿನಲ್‌ನಲ್ಲಿ ವಿಮಾನ ಇಳಿದಾಗ ಮಧ್ಯಾಹ್ನ ಎರಡೂವರೆ ಗಂಟೆಯಾಗಿತ್ತು. ಅಕ್ಟೋಬರ್ ತಿಂಗಳಾಗಿದ್ದರೂ ಸೂರ್ಯ ಆಗಸದ ತುಂಬಾ ನಿಗಿನಿಗಿಸುತ್ತಿದ್ದ. ಒಂದು ಕ್ಷಣ ನನ್ನ ಮೈಂಡ್ ಇದ್ದಕ್ಕಿದ್ದಂತೆ ಬ್ಲಾಕ್ ಆಗಿತ್ತು. ಅದು ಹೇಗಿತ್ತೆಂದರೆ ಒಂದೆರಡು ನಿಮಿಷಗಳ ಕಾಲ ನಾನು ಎಲ್ಲಿದ್ದೇನೆ, ಯಾಕಾಗಿ ಇದ್ದೇನೆ, ನಾನು ಯಾರು ಎಂಬ ವಿಷಯಗಳು ನನ್ನ ಮೆದುಳಿನಿಂದ ಹಾರಿ ಹೋಗಿ ಆಗಸದ ಶೂನ್ಯದಲ್ಲಿ ಲೀನವಾದಂತೆ. ಇಂಥಾ ಒಂದು ಸ್ಥಿತಿ ನನಗೆ ಒದಗಿದ್ದು ಇದೇ ಮೊದಲ ಬಾರಿ. ಎರಡು ನಿಮಿಷದಲ್ಲಿ ನನ್ನ ಮೆದುಳು ಮೊದಲ ಸ್ಥಾಯಿಗೆ ಹಿಂತಿರುಗಿ, ಲಗೇಜ್ ಬೆಲ್ಟ್ ಬಳಿ ಹೋಗಿ